

ಆ ಪಕ್ಷ ಈ ಪಕ್ಷ ಎಂಬುದಿಲ್ಲ, ಸ್ವತಃ ರಾಜಕೀಯ ಎಂಬುದೇ ಒಂದು ಪಕ್ಷ, ಹಾಗೆಯೇ ನಮ್ಮ ರಾಜಕೀಯ ಒಲವುಗಳು ಏನೇ ಇರಲಿ, ನಮ್ಮದೆಲ್ಲ ಕಲಾರಂಗವೆಂಬ ಪಕ್ಷ!' — ಈ ಮಾತುಗಳನ್ನು ಇಷ್ಟು ಸ್ಪಷ್ಟವಾಗಿ ಅ–ವಾಚ್ಯರಂಗವಾದ ದೃಶ್ಯಕಲಾವಿದರುಗಳು ಬಿಡಿಸಿ ಹೇಳದಿರಬಹುದು, ಆದರೆ ಅವರುಗಳ ಸೃಜನಾತ್ಮಕ ಒಡನಾಟದ ಒಟ್ಟಾರೆ ಸಾರವಂತೂ ಇದೇ. ಇದು ನನಗೆ, ನಾನು, ಕಲಾ ಪೂರ್ವಸೂರಿಗಳಿಂದ ಸಾಧಿಸಿಕೊಂಡು, ಆಚರಿಸುತ್ತಿರುವ, ನನ್ನ ಕಲ್ಪನೆಯ ಸ್ವಾತಂತ್ರ್ಯದ ಒಂದು ಮುಖ್ಯ ಭಾಗ.

ನನ್ನ ವ್ಯಕ್ತಿಗತ ಸ್ವಾತಂತ್ರ್ಯಕ್ಕೂ ರಾಷ್ಟ್ರದ ಸ್ವಾತಂತ್ರ್ಯ ಪರಿಕಲ್ಪನೆಗೂ, ಅಭಿವ್ಯಕ್ತಿ ಸ್ವಾತಂತ್ರ್ಯದ ಇತ್ತೀಚಿನ ಬೃಹತ್ ಕಥನಕ್ಕೂ ನಡುವೆ, 'ನನ್ನ ಸ್ವಾತಂತ್ರ್ಯ' ಎಂಬ ನಿರ್ಮಿತಿ ಪಡೆದುಕೊಳ್ಳುತ್ತಿರುವ ದೊಡ್ಡ ದೊಡ್ಡ ಅವತಾರಗಳು ವಿಶ್ವರೂಪದರ್ಶನದಂತಿದೆ: ಅದರ ಅಳತೆ, ಆಕಾರ, ವಿಸ್ತಾರವು ತನ್ನ ಅತಿಮಾನವ ವಿಸ್ತಾರದ ಕಾರಣಕ್ಕೆ ನನ್ನ ತಲೆಮಾರನ್ನು ಅಲುಗಾಡಿಸಿದ್ದಿದೆ. ಜೊತೆಗೆ ಅದು ಕೊಡುವ ಉಪಾಯಗಳೂ ಸಹ ವಿನೋದಮಯವೂ ಅರ್ಥಪೂರ್ಣವೂ ಆಗಿರುವುದು ಸುಳ್ಳಲ್ಲ. ಒಂದೊಮ್ಮೆ ಕಲೆಯ ಬರವಣಿಗೆಯಲ್ಲಿ ತೊಡಗಿಕೊಳ್ಳುವ ಲೇಖನಿ ಸ್ವಯಂ ಅನುಮಾನದಿಂದ ನರಳಿದಾಗ, ಅದೇ ಬಾಲ್ ಪಾಯಿಂಟ್ ಪೆನ್ನನ್ನು ತಿರುಗಿಸಿ ಚಿತ್ರಬರೆಯಲು ಆರಂಭಿಸಿದ್ದಿದೆ.

ಸ್ವಾತಂತ್ರ್ಯ–ಪರಿಕಲ್ಪನೆ–ಪ್ರೇರಿತ 'ಅವನ್ ಗಾರ್ಡ್' ರಕ್ತಗುಣವು (ಯಾವುದೇ ವ್ಯವಸ್ಥೆಯ ಕ್ಲೀಷೆಗಳನ್ನು ಕಲಾತ್ಮಕವಾಗಿ, ಅಣಕಿಸುವ, ಆಧುನಿಕ ಕಲೆಯ ಒಂದು ಮುಖ್ಯ ಹವ್ಯಾಸ) ಒಂದು ಬಾಗಿಲನ್ನು ಮುಚ್ಚುವ ಕ್ರಿಯೆಯು ಮತ್ತೊಂದನ್ನು ತೆರೆಯುವುದೇ ಎಂಬ ಸೂಚನೆಯೇ ಆಗಿರುತ್ತದೆ. ಜೊತೆಗೆ ತರ್ಕವನ್ನು ಆಧರಿಸುವ ಕಲೆಯ ಬರವಣಿಗೆಯಂತಲ್ಲದೆ, ಕ್ರಿಯಾಶೀಲವಾದ ಚಿತ್ರರಚನೆ ಎಂಬುದು 'ಅರ್ಥಾತೀತವಾದ ಅಮೃತಕ್ಕೆ ಹಾರುವ ಕಲಾವಸ್ತುವಿಷಯಗಳೆಂಬ ಗರುಡನಲ್ಲವೇ'! ರಾಜಕೀಯಶಾಸ್ತ್ರದ ಭಾಷೆಯಲ್ಲಿ ಸ್ವತಂತ್ರ ಎಂದರೆ ಕಳೆದುಕೊಂಡ ನೆಲ, ಅರ್ಥ, ಆದರ್ಶ, ಹಕ್ಕುಗಳನ್ನು ಪುನರ್ ಸಂಪಾದಿಸಿಕೊಳ್ಳುವುದು ಎಂಬ ಕಲ್ಪನೆಯೂ ಒಂದಿದೆ. ಅಧ್ಯಾತ್ಮ ಶಾಸ್ತ್ರದಲ್ಲಿ, ಅದು ಕಲ್ಮಶದ ಹೊರೆಯನ್ನು, ಪಾಪ, ಕರ್ಮಗಳನ್ನು ಕಳಚಿಕೊಳ್ಳುವ ಪ್ರಕ್ರಿಯೆ. ವಿಜ್ಞಾನಶಾಸ್ತ್ರದಲ್ಲಿ ಅರಿವಿನ ಸಾಧನಗಳ ಶೋಧನೆ, ಅನ್ವೇಷಣಗಳ ಸಂಪಾದನೆಯೇ ಸ್ವಾತಂತ್ರ್ಯ ಎನ್ನಿಸಿಕೊಳ್ಳುತ್ತದೆ. 20ನೇ ಶತಮಾನದ ಎರಡನೇ ಭಾಗದ ಆರಂಭಿಕ ದಶಕಗಳಲ್ಲಿ ಹುಟ್ಟಿದ ನನ್ನಂತವರಿಗೆ ಸ್ವಾತಂತ್ರ್ಯದ ಈ ಮೂರು ಮುಖ್ಯ ಸ್ವಾತಂತ್ರ್ಯದ ಮಾದರಿಗಳ ಪ್ರಭಾವ ಅನಿವಾರ್ಯ. ಬೇರೆ ಕಾಲಘಟ್ಟದಲ್ಲಿ ಸ್ವಾತಂತ್ರ್ಯದ ಕಲ್ಪನೆ ಭಿನ್ನವೂ ಸೀಮಿತವೂ ಆಗಿರುತ್ತಿತ್ತೇನೋ.

ಕಲಾವಿದರಿಗೆ ಮಾತ್ರ ಸ್ವಾತಂತ್ರ್ಯದ ಅನಿವಾರ್ಯತೆಯ ಜೊತೆಗೆ ಅದರ ಅಯೋಮಯ ಗುಣವೇ ದಿನನಿತ್ಯದ, ದೈನಂದಿನ ಜೀವನದ ಅಸಂಗತ–ಸಂಗಾತಿ ಆಗಿರುತ್ತದೆ. ಇದೇ ಕಾರಣಕ್ಕೆ ಇರಬಹುದು, ರಾಜಕೀಯ ಸ್ವಾತಂತ್ರ್ಯ ನಮಗೆ ಅರ್ಥವಾಗುತ್ತದೆ, ಅದನ್ನು ಅನುಸರಿಸುತ್ತೇವೆ ಸಹ. ಆದರೆ ಕಲಾ ವ್ಯಕ್ತಿತ್ವದ ಸ್ವಾತಂತ್ರ್ಯದ ಪರಿಕಲ್ಪನೆಯ ವಿಸ್ತಾರವನ್ನು ಅಂತಹವರಿಗೆ ವಿವರಿಸಲಾಗದ ಸಂಕೀರ್ಣತೆಯ ಅಸಹಾಯಕತೆಯನ್ನು ಒಂದು ವರ ಎಂದೇ ಭಾವಿಸಬಹುದು. ಮೊದಲೆಲ್ಲ ನಮ್ಮ ಕಲಾವಲಯದಲ್ಲಿ ಜನಜನಿತವಾಗಿದ್ದ ಜೋಕ್ ಒಂದಿತ್ತು. 'ಚಿತ್ರಸಂತೆ' ಅಂತಹ ಸಂದರ್ಭಗಳಲ್ಲಿ ಇದು ಹೆಚ್ಚು. ಕಲೆಗೆ ಅನುದಾನ ನೀಡುವ, ಆದರೆ ಕಲೆಯನ್ನು ಗ್ರಹಿಸಲಾಗದ ಉನ್ನತ ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಬಂದಾಗ ನಿಸರ್ಗ ಚಿತ್ರಗಳನ್ನೇ ಅವರುಗಳಿಗೆ ಕೊಡುಗೆ ನೀಡುತ್ತಿದ್ದೆವು. ಗಂಭೀರ ಸಂಯೋಜನೆಯ ಕೃತಿಗಳನ್ನು ಕೊಟ್ಟಲ್ಲಿ ಸ್ವೀಕರಿಸಿದವರು ಕೇವಲ ಫ್ರೇಮ್‌ಗಳನ್ನು ಉಳಿಸಿಕೊಂಡು, ಚಿತ್ರವನ್ನು ಹೊರಕ್ಕೆಸೆದು, ಕುಟುಂಬದ ಫೋಟೊಗಳನ್ನು ಅದರಲ್ಲಿ ಸೇರಿಸಿಬಿಟ್ಟ ಅನೇಕ ಉದಾಹರಣೆಗಳಿವೆ. ಸೃಜನಶೀಲ ಪ್ರಕಾರಗಳ ಗುಣಾತ್ಮಕ ಶ್ರೇಣೀಕರಣದಲ್ಲಿ ನಿಸರ್ಗಚಿತ್ರಗಳು ಅಷ್ಟೇನೂ ಗೌರವಾನ್ವಿತ ಹಂತಕ್ಕೆ ಸೇರಿದವುಗಳಲ್ಲ. ಸಿನಿಮಾದಲ್ಲಿ, ನೃತ್ಯ ನಾಟಕದಲ್ಲಿ ಹೀಗೆ ಮಾಡಲು ಸಾಧ್ಯವೇ? ಅರ್ಥವಾಗದವರಿಗೆ ಇದು, ಅರ್ಥೈಸುವವರಿಗೆ ಇದು ಎಂದು ಭಿನ್ನ ಭಿನ್ನ ಸಿನಿಮಾಗಳನ್ನು ತೋರಿಸಲು ಸಾಧ್ಯವೇ? ದೃಶ್ಯಕಲೆಗೇ ನಿರ್ದಿಷ್ಟವಾದ ಸ್ವಾತಂತ್ರ್ಯದ

